ಕರ್ನಾಟಕ ವಿಧಾನಸಭಾ ಚುನಾವಣೆ 2018

ಬಿಜೆಪಿ ಭರವಸೆ 2018-23

ಸರ್ವರಿಗೂ ಸಮಬಾಳು - ಸರ್ವರಿಗೂ ಸಮಪಾಲು



ಅರವಿಂದ ಲಿಂಬಾವಳಿ

ಮಹದೇವಪುರ ವಿಧಾನಸಭಾ ಕ್ಷೇತ್ರ

ಬಿಜೆಪಿ

ಸರ್ಕಾರ ಬದಲಿಸಿ,
ಬಿಜೆಪಿ ಗೆಲ್ಲಿಸಿ

ಜನಪರಶಕ್ತಿ
ಚುನಾವಣಾ
ಪ್ರಣಾಳಿಕೆ

ಕಮಲದ ಬಟನ್ ಒತ್ತಿ - ಬಿಜೆಪಿಗೆ ಪೂರ್ಣ ಬಹುಮತ ನೀಡಿ

ಪರಿವಿಡಿ

ಮಹದೇವಪುರ ವಿಧಾನಸಭಾ ಕ್ಷೇತ್ರ

ಮಹದೇವಪುರದ ಆದ್ಯತೆಯ ಕೆಲಸಗಳು

ರಸ್ತೆ, ಸಾರಿಗೆ, ಸಂಚಾರ, ರೈಲು, ಮೆಟ್ರೋ

ಕೆಲವು ನಿರ್ದಿಷ್ಟ ಪರಿಹಾರಗಳು

ಕಸ ನಿರ್ವಹಣೆ, ಕೆರೆ ಅಭಿವೃದ್ಧಿ,
ಪರಿಸರ ಸಂರಕ್ಷಣೆ

ಸಾರ್ವಜನಿಕ ಮೂಲಸೌಕರ್ಯಗಳು

ಸಾಮಾಜಿಕ ಚಟುವಟಿಕೆಗಳು,
ಸೇವಾಕಾರ್ಯಗಳು

ಸರ್ವಸ್ಪರ್ಶಿ ಅಭ್ಯುದಯ

ಕಾನೂನು ಸುವ್ಯವಸ್ಥೆ

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಮಹದೇವಪುರದ ಆದ್ಯತೆಯ ಕೆಲಸಗಳು

1. **ಮಹದೇವಪುರ ಟಾಸ್ಕ್‌ಫೋರ್ಸ್ ರಚನೆ :** ಮಹದೇವಪುರದ ಕ್ಷೇತ್ರದ ಅಭಿವೃದ್ಧಿಗಾಗಿ ಜನಾಭಿಪ್ರಾಯ ಸಂಗ್ರಹಿಸಿ ಒಂದು ಕಾರ್ಯಪಡೆ (ಟಾಸ್ಕ್‌ಫೋರ್ಸ್) ರಚನೆ ಮಾಡಲಾಗುವುದು. ಅದರ ಕಾರ್ಯಸೂಚಿಯಂತೆ ಅಭಿವೃದ್ಧಿ ಕಾರ್ಯ.
2. **ಬೆಂಗಳೂರು ಮಾಸ್ಟರ್ ಪ್ಲಾನ್ :** ಬೆಂಗಳೂರಿನ ಪರಿಷ್ಕೃತ ಮಾಸ್ಟರ್ ಪ್ಲಾನನ್ನು ಸಮಗ್ರವಾಗಿ ಜನರ ಮುಂದಿಟ್ಟು, ಮಹದೇವಪುರಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಿಸಿ ಅದರಂತೆ ಯೋಜನೆ ರೂಪಿಸುವಂತೆ ಸರ್ವ ಪ್ರಯತ್ನ.
3. **ಬಾಕಿ ಕೆಲಸ ಪೂರ್ಣ:** ಒಂದು ವರ್ಷದ ಒಳಗೆ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಆರಂಭಿಸಿದ್ದ (ಮತ್ತು ಈಗಿನ ಕಾಂಗ್ರೆಸ್ ಸರ್ಕಾರವು ತಡೆಹಿಡಿದಿದ್ದ, ಅಡ್ಡಗಾಲು ಹಾಕಿದ್ದ) ಎಲ್ಲ ಆರೋಗ್ಯ ಕೇಂದ್ರ, ಶಾಲೆ-ಕಾಲೇಜು-ಪಾಲಿಟೆಕ್ನಿಕ್‌ಗಳ ಕಟ್ಟಡ ಮತ್ತು ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾರ್ವಜನಿಕ ಬಳಕೆಗೆ ಮುಕ್ತ ಮಾಡುವುದು.
4. **ಕಾವೇರಿ ಕುಡಿಯುವ ನೀರಿನ ಜಾಲದ ವಿಸ್ತರಣೆ:** ಈಗಾಗಲೇ ವಿಸ್ತರಣೆಯಾದ ಕಾವೇರಿ ಕುಡಿಯುವ ನೀರಿನ ಹಂತವನ್ನು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಬಿಬಿಎಂಪಿ ವ್ಯಾಪ್ತಿಗೆ ವಿಲೀನಗೊಂಡಿರುವ 31 ಹಳ್ಳಿಗಳಿಗೆ ವಿಸ್ತರಿಸುವುದು.
5. ಕೇಂದ್ರ ಸರಕಾರ ಯೋಜನೆಗಳ ಮಾಹಿತಿ ಮತ್ತು ಪರಿಣಾಮಕಾರಿ ಅನುಷ್ಠಾನ.
6. ಸರ್ಕಾರಿ ಜಮೀನುಗಳ ಒತ್ತುವರಿ ತೆರವು.

ಇವುಗಳಲ್ಲದೆ ಬಿಜೆಪಿಯ ಬೆಂಗಳೂರು ಮತ್ತು ಕರ್ನಾಟಕ ಪ್ರಣಾಳಿಕೆಗಳಲ್ಲಿ ಪ್ರಕಟವಾಗಿ, ಮಹದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಅನ್ವಯಿಸುವ ಎಲ್ಲ ಯೋಜನೆಗಳನ್ನೂ ಕಾರ್ಯಗತಗೊಳಿಸಲಾಗುವುದು.

ಬಿಜೆಪಿ

ಸರ್ಕಾರ ಬದಲಿಸಿ,
ಬಿಜೆಪಿ ಗೆಲ್ಲಿಸಿ

ನವಕರ್ನಾಟಕ ಜನಪರ ಶಕ್ತಿ
ನಮ್ಮ ಅಭಿಪ್ರಾಯಗಳೊಂದಿಗೆ ಮುನ್ನಡೆ

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಮಹದೇವಪುರ ನೀಲನಕಾಶೆಯ ಆರು ಮುಖ್ಯ ವಿಭಾಗಗಳು

ರಸ್ತೆ, ಸಾರಿಗೆ, ಸಂಚಾರ, ರೈಲು, ಮೆಟ್ರೋ

- ಟ್ರಾಫಿಕ್ ಸಮಸ್ಯೆ ನಿವಾರಿಸಲು ತಜ್ಞರ ಸಲಹಾ ಸಮಿತಿಯನ್ನು ರಚಿಸುವುದು ಹಾಗೂ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವುದು. ಸಂಚಾರ ಯೋಜನೆ: ಜನರಿಗೆ ಯಾವುದೇ ತೊಂದರೆ ಆಗದ ಹಾಗೆ ಸಂಚಾರ ಯೋಜನೆ
- ಬಾಕಿ ಉಳಿದ ಎಲ್ಲ ಮೇಲ್ಸೇತುವೆ, ಅಂಡರ್‌ಪಾಸ್, ಸ್ಕೈವಾಕ್, ಪಾದಚಾರಿ ಮಾರ್ಗಗಳು, ಸಂಪರ್ಕ ರಸ್ತೆಗಳು - ಎಲ್ಲವನ್ನೂ ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು.
- ಸುಗಮ ರಸ್ತೆ ದಾಟುವಿಕೆಗಾಗಿ ಹೊರ ವರ್ತುಲ ರಸ್ತೆ ಹಾಗು ಸಂಚಾರದಟ್ಟಣೆಇರುವ ರಸ್ತೆಗಳಲ್ಲಿ ಸ್ಕೈವಾಕ್ ಗಳ ನಿರ್ಮಾಣ
- ರೈಲ್ವೇ ಮೇಲು ಸೇತುವೆಗಳ ನಿರ್ಮಾಣ
- ಮುಂಚಿತ ಸಂಚಾರದಟ್ಟಣೆ ಮಾಹಿತಿ ನೀಡಿಕೆ ಪ್ರಯತ್ನ.
- ಸಿಗ್ನಲ್ ಫ್ರೀ ಕಾರಿಡಾರ್ ರಸ್ತೆ ನಿರ್ಮಾಣ.
- ಸಿಡಿಪಿ ರಸ್ತೆಗಳ ನಿರ್ಮಾಣ.
- ಸಂಪರ್ಕ ರಸ್ತೆಗಳ ನಿರ್ಮಾಣ ಹಾಗೂ ಒಳರಸ್ತೆ, ಸಣ್ಣರಸ್ತೆಗಳ ಡಾಂಬರೀಕರಣ.
- ಬೀದಿ ದೀಪಗಳನ್ನು ಅಳವಡಿಕೆ ಹಾಗೂ ಸಮರ್ಪಕ ನಿರ್ವಹಣೆ.
- ಪಾರ್ಕಿಂಗ್ ಸಮಸ್ಯೆಯನ್ನು ಬಗೆಹರಿಸಲು ಪಿಪಿಪಿ ಮಾದರಿಗೆ ಉತ್ತೇಜನ.

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಕೆಲವು ನಿರ್ದಿಷ್ಟ ಪರಿಹಾರಗಳು

- ಮಾರತ್ತಹಳ್ಳಿಯ ಜಂಕ್ಷನ್‌ನಲ್ಲಿ ಯು ಟರ್ನ್ ಅವಕಾಶಕ್ಕೆ ಕ್ರಮ
- ಹಲವು ಪ್ರದೇಶಗಳಿಗೆ ಮೆಟ್ರೋ ವಿಸ್ತರಣೆ: ಟಿನ್ ಫ್ಯಾಕ್ಟರಿಯಿಂದ ವೈಟ್‌ಫೀಲ್ಡ್‌ವರೆಗೆ ಮತ್ತು ಮೆಟ್ರೋ ರೈಲು ಸಂಪರ್ಕ ನಿರ್ಮಾಣ ಮಾಡಲಾಗುವುದು. ಕಾಡುಗೋಡಿಗೆ ಬಂದಿರುವ ಮೆಟ್ರೋವನ್ನು ಹಳೆ ಮದ್ರಾಸು ರಸ್ತೆ ಕಾಟಂನಲ್ಲೂರುವರೆಗೆ ವಿಸ್ತರಣೆ. ಟ್ರಾಫಿಕ್ ಸಮಸ್ಯೆ ಕಡಿಮೆ ಮಾಡಲು ಮೆಟ್ರೋ ೩ ನೇ ಹಂತದ ಕಾಮಗಾರಿ ಪೂರ್ಣಗೊಳಿಸಲು ಉತ್ತೇಜಿಸುವುದು.
- ಕೆಆರ್ ಪುರಂ ಹೊಸಕೋಟೆ ಎಲೆವೇಟೆಡ್ ಕಾರಿಡಾರ್: ಕೆ ಆರ್ ಪುರಂನಿಂದ ಹೊಸಕೋಟೆವರೆಗೆ ಎಲೆವೇಟೆಡ್ ಕಾರಿಡಾರ್ ನಿರ್ಮಾಣ ಮಾಡಲಾಗುವುದು. ಇದನ್ನು ಬೈಯಪ್ಪನಹಳ್ಳಿವರೆಗೂ ವಿಸ್ತರಿಸಲು ಸರ್ವಪ್ರಯತ್ನ.
- ಈಸ್ಟ್ ಏರ್‌ಪೋರ್ಟ್ ಅಪ್ರೋಚ್ ರಸ್ತೆ: ಎಲೆಕ್ಟ್ರಾನಿಕ್ ಸಿಟಿಯಿಂದ ಗುಂಜೂರು, ವರ್ತೂರು, ಕಾಡುಗೋಡಿ ಮತ್ತು ಬೂದಿಗೆರೆ ಮಾರ್ಗವಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಈಸ್ಟ್ ಏರ್‌ಪೋರ್ಟ್ ಅಪ್ರೋಚ್ ರಸ್ತೆ ನಿರ್ಮಾಣ
- ಚಿನ್ನಪ್ಪನಹಳ್ಳಿಯ ಹತ್ತಿರ ಪಣತ್ತೂರು - ಕಾರ್ಮೆಲರಾಂ ನಡುವೆ ರೈಲ್ವೆ ಓವರ್ ಬ್ರಿಜ್ (ಆರ್ ಓ ಬಿ) ನಿರ್ಮಾಣ
- ದೊಡ್ಡನೆಕ್ಕುಂದಿಯಲ್ಲಿ ರೈಲ್ವೆ ಅಂಡರ್ ಬ್ರಿಜ್ (ಆರ್ ಯು ಬಿ) ಅಗಲೀಕರಣ
- ಗುಂಜೂರಿನಲ್ಲಿ ಇಂಟರ್ ನ್ಯಾಷನಲ್ ಸ್ಟೇಡಿಯಂ ನಿರ್ಮಾಣ.

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಕಸ ನಿರ್ವಹಣೆ, ಕೆರೆ ಅಭಿವೃದ್ಧಿ, ಪರಿಸರ ಸಂರಕ್ಷಣೆ

ವೈಜ್ಞಾನಿಕ ಕಸ ನಿರ್ವಹಣೆ

- ಕಸದ ಸಮಸ್ಯೆಯನ್ನು ನಿವಾರಿಸಲು ಪರಿಣಾಮಕಾರಿ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಕಸ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆತರುವುದು.
- ಕಸ ವಿಲೇವಾರಿಯ ಸಮಯವನ್ನು ನಿಗದಿಪಡಿಸುವುದು.
- ಒಳ ಚರಂಡಿ (ಯು.ಜಿ.ಡಿ.) ವ್ಯವಸ್ಥೆಯ ನಿರ್ಮಾಣ ಹಾಗೂ ಎಸ್.ಟಿ.ಪಿ. ಪ್ಲಾಂಟ್‌ಗಳಿಗೆ ಜೋಡಣೆ.
- ಕಸ ಸಮಸ್ಯೆಯ ನಿವಾರಣೆಗಾಗಿ ವಾರ್ಡಿಗೊಂದರಂತೆ ವಿಂಗಡಿಸಿದ ಕಸವನ್ನು ಒಗ್ಗೂಡಿಸುವ ಕೇಂದ್ರವನ್ನು ಸ್ಥಾಪಿಸುವುದು. ತಲಾ ಎರಡು ವಾರ್ಡ್‌ಗೆ ಒಂದರಂತೆ ಘನತ್ಯಾಜ್ಯ ವಿಲೇವಾರಿ ಘಟಕಗಳ ಸ್ಥಾಪನೆ
- ಮುಖ್ಯರಸ್ತೆಗಳಲ್ಲಿ ಯಾಂತ್ರೀಕೃತ ಕಸ ಗುಡಿಸುವ ವ್ಯವಸ್ಥೆ ಜಾರಿ.
- ಕ್ಷೇತ್ರದಲ್ಲಿ ಸ್ವಚ್ಛ ಭಾರತ ಅಭಿಯಾನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯಗಳ ನಿರ್ಮಾಣ.

ಕೆರೆಗಳ ರಕ್ಷಣೆಗೆ ಕ್ರಮ

- ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್‌ಜಿಟಿ) ಸೂಚನೆಯಂತೆ ವರ್ತೂರು ಕೆರೆ ಮತ್ತು ಬೆಳ್ಳಂದೂರು ಕೆರೆ ಅಭಿವೃದ್ಧಿ.
- ಕೆರೆ ಶುದ್ಧೀಕರಣ, ಹೂಳು ಎತ್ತುವುದು, ನೊರೆ ಸಮಸ್ಯೆ ಬಗೆಹರಿಸುವುದು ಹಾಗು ಕೆರೆಗಳಿಗೆ ಬೇಲಿ ಹಾಕಿ ಸಂರಕ್ಷಿಸುವುದು.
- ರಾಜಕಾಲುವೆಗಳನ್ನು ಕೆರೆಗಳಿಗೆ ಜೋಡಿಸುವುದು. ಪರಂಪರಾಗತ

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ನೀರು ಹರಿವು ವ್ಯವಸ್ಥೆಗಳನ್ನು ಪುರುಜ್ಜೀವಿಸುವುದು. ರಾಜಕಾಲುವೆಗಳ ಒತ್ತುವರಿಯನ್ನು (ಖಾಸಗಿ ಅಥವಾ ಇತರೆ) ತೆರವುಗೊಳಿಸಿ ಅವುಗಳ ಸಂಪರ್ಕವನ್ನು ಮರುಸ್ಥಾಪನೆ ಮಾಡಲಾಗುವುದು.

- ಕ್ಷೇತ್ರದಲ್ಲಿರುವ ಇತರೆ ಜಲಮೂಲಗಳನ್ನೂ ಸಹ ಪುನರುಜ್ಜೀವನಗೊಳಿಸಲು, ಅಂತರ್ಜಲದ ಮಟ್ಟ ಹೆಚ್ಚಿಸಲು ಪ್ರಯತ್ನ.
- ಒತ್ತುವರಿಯಾದ ಎಲ್ಲ ಕೆರೆ ಮತ್ತು ರಾಜಕಾಲುವೆ ಪ್ರದೇಶಗಳನ್ನು ತೆರವುಗೊಳಿಸುವುದು.

ಕ್ಷೇತ್ರದೆಲ್ಲೆಡೆ ಹಸಿರೀಕರಣ

- ರಸ್ತೆಗಳ ಇಕ್ಕೆಲಗಳಲ್ಲಿ ಗಿಡಗಳನ್ನು ನೆಡುವುದು ಹಾಗೂ ಪುಟ್‌ಪಾತ್‌ಗಳ ನಿರ್ಮಾಣ.
- ಹೆಚ್ಚುವರಿ ಆಹಾರತ್ಯಾಜ್ಯ ಕಡಿಮೆಮಾಡಲು ಸಾರ್ವಜನಿಕ ಫ್ರಿಡ್ಜ್‌ಗಳ ಸ್ಥಾಪನೆ.
- ಉದ್ಯಾನವನಗಳ ನಿರ್ಮಾಣ; ಮಕ್ಕಳಿಗೆ ಮತ್ತು ಹಿರಿಯರಿಗೆ ಪಾರ್ಕ್ ನಿರ್ಮಾಣ; ಯುವಕರಿಗೆ ಒಪನ್ ಜಿಮ್ ನಿರ್ಮಾಣ.

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಸಾರ್ವಜನಿಕ ಮೂಲಸೌಕರ್ಯಗಳು

ನಿರ್ವಸಿತರಿಗೆ ನಿವೇಶನ; ಬಡವರಿಗೆ ಮನೆ ನಿರ್ಮಾಣ

- ವಸತಿರಹಿತ ಕಡುಬಡವರಿಗೆ ವಸತಿ ವ್ಯವಸ್ಥೆ
- ಮಹದೇವಪುರದ ನಿರ್ವಸಿತರಿಗೆ ನಿವೇಶನ / ವಸತಿ ನೀಡಲು ಎಲ್ಲ ಪ್ರಯತ್ನ ಮುಂದುವರೆಸುವುದು. ಹಾಗೆಯೇ ಹಕ್ಕುಪತ್ರಗಳನ್ನು ನೀಡುವ ಯೋಜನೆಯನ್ನು ತೀವ್ರಗೊಳಿಸುವುದು.
- ಬಡ ವಿಶಿಷ್ಟ ಚೇತನರಿಗೆ ಮಾಸಾಶನ ಮತ್ತು ವಸತಿ / ನಿವೇಶನ ನೀಡಿಕೆಗೆ ಈಗಿನ ಎಲ್ಲ ಯೋಜನೆಗಳ ಬಳಕೆ.

ಆರೋಗ್ಯ ರಕ್ಷಣೆ

- ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದು ಹಾಗೂ ಅವಶ್ಯಕತೆಗಳಿಗೆ ನುಸಾರವಾಗಿ ನೂತನ ಆಸ್ಪತ್ರೆಗಳನ್ನು ತೆರೆಯುವುದು.
- ಹೊಸ ಜನೌಷಧ ಕೇಂದ್ರಗಳ ಸ್ಥಾಪನೆ.

ಅಡುಗೆಗೆ ಎಲ್‌ಪಿಜಿ ಗ್ಯಾಸ್‌ಪೈಪ್‌ಲೈನ್ , ಕುಡಿಯುವ ನೀರು

- ಪಿಪಿಪಿ ಮಾದರಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಯನ್ನು ಮುಂದುವರಿಸಲಾಗುವುದು.
- ಕುಡಿಯುವ ನೀರಿನಹಳೆಯ ಪೈಪ್‌ಗಳನ್ನು ಬದಲಾಯಿಸಿ, ಶುದ್ಧ ನೀರನ್ನು ಪೂರೈಸುವುದು.
- ಕ್ಷೇತ್ರದ ಎಲ್ಲೆಡೆ ಪರಿಣಾಮಕಾರಿಯಾಗಿ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಸುವುದು.
- ಮಳೆಗಾಲದಲ್ಲಿ ಮೋರಿಯ ನೀರು ಮನೆಗಳಿಗೆ ನುಗ್ಗದಂತೆ ವ್ಯವಸ್ಥೆ ಮಾಡುವುದು.
- ಅಡುಗೆಗೆ ಅನಿಲ್ ಪೈಪ್:ಮನೆಗಳಿಗೆ ಗ್ಯಾಸ್ ಪೈಪ್ ಅಳವಡಿಕೆ ಹಾಗೂ ಉಜ್ವಲಾ ಯೋಜನೆಯನ್ನು ಫಲಾನುಭವಿಗಳಿಗೆ ತಲುಪಿಸುವುದು.

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಸಾಮಾಜಿಕ ನ್ಯಾಯ

- ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಯನ್ನು ದೊರಕಿಸಿ ಕೊಡಲು ವಿತರಣಾ ಕೇಂದ್ರಗಳನ್ನು ಸ್ಥಾಪಿಸುವುದು.
- ಸರ್ಕಾರಿ ಸವಲತ್ತುಗಳ ಮಾಹಿತಿ ನೀಡಲು ಹಾಗೂ ಅರ್ಹ ಫಲಾನುಭವಿಗಳಿಗೆ ದೊರಕಿಸಿ ಕೊಡಲು ಸಹಾಯ ಕೇಂದ್ರಗಳ ಸ್ಥಾಪನೆ.
- ಸಮುದಾಯ ಭವನಗಳ ನಿರ್ಮಾಣ.
- ಸ್ವ ಸಹಾಯ ಸಂಘಗಳಿಗೆ ಉತ್ತೇಜನ ನೀಡುವುದು.

ಸಾಮಾಜಿಕ ಚಟುವಟಿಕೆಗಳು, ಸೇವಾಕಾರ್ಯಗಳು

ಮಹದೇವಪುರ ಅಭಿವೃದ್ಧಿಗೆ ಐಟಿ ರಂಗದ ಭಾಗಿತ್ವ

- ಇನ್ನಷ್ಟು ಸಾಮಾಜಿಕ ಕಾರ್ಯಗಳು: ಮಹದೇವಪುರದಲ್ಲಿ ವರ್ಷಕ್ಕೊಮ್ಮೆ ಐಟಿ ಕಂಪೆನಿಗಳ ಮುಖ್ಯಸ್ಥರೂ ಸೇರಿದಂತೆ ಹಲವು ರಂಗಗಳ ಪ್ರಮುಖರ ಸಭೆ ಕರೆದು ಮಹದೇವಪುರ ಅಭಿವೃದ್ಧಿಯ ಬಗ್ಗೆ ಮುಕ್ತ ಅಭಿಪ್ರಾಯ ಸಂಗ್ರಹಿಸಿ ಅದರಂತೆ ಕಾರ್ಯಕ್ರಮಗಳನ್ನು ರೂಪಿಸುವುದು. ಐಟಿ ಸಂಸ್ಥೆಗಳಿಂದ ಇನ್ನಷ್ಟು ಪ್ರಮಾಣದ ಸಾಮಾಜಿಕ ಮತ್ತು ಸಾರ್ವಜನಿಕ ಕಾರ್ಯಗಳಿಗೆ ಸಹಭಾಗಿತ್ವ ಪಡೆಯುವುದು.

ಕನ್ನಡದ ಕೆಲಸಗಳಿಗೆ ವಿಶೇಷ ಗಮನ

- ಮಹದೇವಪುರದಲ್ಲಿ ಕನ್ನಡದ ಕೆಲಸಗಳಿಗೆ ವಿಶೇಷ ಗಮನ ನೀಡಿ, ಕನ್ನಡ ಸಾಹಿತ್ಯ ಭವನ ನಿರ್ಮಿಸುವುದು, ಅನ್ಯಭಾಷಿಗರಿಗೆ ಕನ್ನಡ ಕಲಿಕಾ ಕೇಂದ್ರಗಳ ಸ್ಥಾಪನೆ
- ಮಹದೇವಪುರ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವುದು.

ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಉದ್ಯೋಗ, ಆರೋಗ್ಯ, ಕ್ರೀಡಾ ಮೇಳಗಳು

- ಯುವಕರಿಗೆ ಉದ್ಯೋಗ ದೊರಕಿಸುವ ಉದ್ಯೋಗ ಮೇಳ, ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಆರೋಗ್ಯ ಮೇಳ, ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಕ್ರೀಡಾಮೇಳ - ಇವೆಲ್ಲವನ್ನೂ ಹಿಂದೆಂದಿಗಿಂತ ಹೆಚ್ಚು ವ್ಯಾಪಕವಾಗಿ ಸಂಘಟಿಸುವುದು.

ಸರ್ವಸ್ಪರ್ಶೀ ಅಭ್ಯುದಯ

ಶಿಕ್ಷಣ ಕೌಶಲ್ಯಅಭಿವೃದ್ಧಿ, ಕ್ರೀಡೆ

- ಮಹಿಳೆಯರಿಗೆ, ಯುವಕರಿಗೆ, ಹಿರಿಯ ನಾಗರಿಕರಿಗೆ, ವಿಶಿಷ್ಟ ಚೇತನರಿಗೆ, - ಹೀಗೆ ಸಮಾಜದ ಎಲ್ಲ ವರ್ಗಗಳ ಜನತೆಗೆ ಸಾಮಾಜಿಕ ಸೌಕರ್ಯಗಳು.
- ಮಹಿಳೆಯರಿಗಾಗಿ ಪ್ರತ್ಯೇಕ ಕೌಶಲ್ಯ ಅಭಿವೃದ್ಧಿ ಕೇಂದ್ರ ಹಾಗೂ ಹೊಲಿಗೆ ತರಬೇತಿ ಕೇಂದ್ರಗಳ ಸ್ಥಾಪನೆ.
- ಅಂಗವಿಕಲರಿಗೆ ವಿಶೇಷ ತರಬೇತಿಕೇಂದ್ರ ಸ್ಥಾಪಿಸಿ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು.
- ನಿರುದ್ಯೋಗಿ ಯುವಕರಿಗೆ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಿ ತರಬೇತಿ ಹಾಗೂ ಉದ್ಯೋಗವ್ಯವಸ್ಥೆಯನ್ನುಕಲ್ಪಿಸುವುದು.
- ಸರ್ಕಾರಿ ಶಾಲಾ-ಕಾಲೇಜುಗಳ ಗುಣಮಟ್ಟ ಹೆಚ್ಚಿಸುವುದು ಮತ್ತು ಸಮರ್ಪಕ ನಿರ್ವಹಣೆ.
- ಶಿಕ್ಷಣದ ಹಕ್ಕು ಕಾಯ್ದೆಯನ್ನು ಸೌಹಾರ್ದಯುತವಾಗಿ ಜಾರಿಗೊಳಿಸಲು ಕ್ರಮಗಳು.
- ಮಕ್ಕಳಿಗಾಗಿ ಆಟದ ಮೈದಾನಗಳ ನಿರ್ಮಾಣ
- ಗ್ರಂಥಾಲಯ ಹಾಗೂ ಡಿಜಿಟಲ್ ಗ್ರಂಥಾಲಯಗಳ ಸ್ಥಾಪನೆ.

ಅರವಿಂದ ಲಿಂಬಾವಳಿ

- ಮಹದೇವಪುರದ ಜನತೆಯ ಕಣ್ಣಿನಲ್ಲಿ ಕ್ಷೇತ್ರದ ಬೆಳವಣಿಗೆಯೇ ಮೊದಲ ಆದ್ಯತೆ ಎಂದು ತಿಳಿದ **ಜನಪರ ಶಾಸಕ.**
- ನಾಡಿನ ಯುವಕರ ದೃಷ್ಟಿಯಲ್ಲಿ ಭಯೋತ್ಪಾದನೆ ವಿರುದ್ಧ ಸಿಡಿದೆದ್ದ **ಯುವನಾಯಕ.**
- ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣರಂಗದ ತಜ್ಞರು, ಪಾಲಕರು – ಇವರೆಲ್ಲರಿಗೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದ **ಪ್ರಗತಿಪರ ಸಚಿವ.**
- ಕರ್ನಾಟಕದ ನೋವು ಬಲ್ಲ ಹೃದಯಗಳಿಗೆ ಅವರೊಬ್ಬ ಬರ–ನೆರೆ ಸಂತ್ರಸ್ತರ ನೆರವಿಗೆ ಧಾವಿಸಿದ **ಹೃದಯವಂತ ಮುತ್ಸದ್ದಿ.**
- ಪಕ್ಷರಾಜಕಾರಣದ ಕಾರ್ಯಕರ್ತರಿಗೆ, ಅರವಿಂದ ಲಿಂಬಾವಳಿ ಒಬ್ಬ **ಚತುರ ಸಂಘಟಕ.**
- ಸಮಾಜದ ಗಣ್ಯರ ಕಣ್ಣಲ್ಲಿ ದೇಶದ ಸಂಸ್ಕೃತಿ, ಹಿರಿಮೆ, ಗರಿಮೆ, ಪರಂಪರೆಯನ್ನು ಅತೀವವಾಗಿ ಗೌರವಿಸುವ **ಅಪ್ಪಟ ದೇಶಾಭಿಮಾನಿ.**
- ಸ್ನೇಹಕ್ಕೆ ಒದಗುವ ಮಿತ್ರ; ಜನರಿಗೆ ಎಟುಕುವ ಕಾರ್ಯಕರ್ತ. ನಸುನಗುವಿನ ಸ್ವಭಾವ; ಜೊತೆಗೇ ಖಡಕ್ ಮಾತುಗಳಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಮುಂದಾಗುವ **ಜನನಾಯಕ.**
- ಅರವಿಂದ ಲಿಂಬಾವಳಿಯವರ ಈ ಬಹುಮುಖ ವ್ಯಕ್ತಿತ್ವವನ್ನು ಸರಳವಾಗಿ ಬಣ್ಣಿಸುವುದಾದರೆ, ಅವರು ಮಹದೇವಪುರದ ನಾಗರಿಕರ ಪ್ರಿಯ ಪ್ರತಿನಿಧಿ ಮತ್ತು **ಕರ್ನಾಟಕದ ಯುವ ನೇತಾರ.**

ಚತುರ ಸಂಘಟಕ, ಜನಪ್ರಿಯ ನಾಯಕ

ಮಹದೇವಪುರವನ್ನು ಕಳೆದ ಹತ್ತು ವರ್ಷಗಳಿಂದ ಪ್ರತಿನಿಧಿಸುತ್ತಿರುವ ಶ್ರೀ ಅರವಿಂದ ಲಿಂಬಾವಳಿಯವರು ಭಾರತೀಯ ಜನತಾ ಪಾರ್ಟಿಯ ಸಂಘಟನಾ ಕಾರ್ಯಗಳಲ್ಲಿ ಸಕ್ರಿಯರಾಗಿದ್ದಾರೆ. ಅವರ ಸಂಘಟನಾ ಚಾತುರ್ಯ ಮತ್ತು ರಾಜ್ಯವ್ಯಾಪಿ ಜನನಾಡಿಯ ಅರಿವು – ಇವುಗಳನ್ನು ಗಮನಿಸಿ ಈಗ ಎಂಟನೆಯ ಬಾರಿ ಅವರನ್ನು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನಿಯುಕ್ತಿ ಮಾಡಲಾಗಿದೆ. ಈಗ ಅವರು ಹತ್ತು ಜಿಲ್ಲೆಗಳ ಸಂಘಟನಾತ್ಮಕ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಬಿಜೆಪಿಯ "ಭ್ರಷ್ಟರನ್ನು ತೊಲಗಿಸಿ, ಕರ್ನಾಟಕ ಉಳಿಸಿ" ಯಾತ್ರೆ, ಬೆಳಗಾವಿ ವಿಶೇಷ ಅಧಿವೇಶನದ ಸಂದರ್ಭದಲ್ಲಿ ನಡೆದ ರೈತರ ಬೃಹತ್ ಪ್ರತಿಭಾಟನಾ ರ್ಯಾಲಿ, ರೈತರ ಆತ್ಮಹತ್ಯೆ ತಡೆಯಲು ಹಮ್ಮಿಕೊಂಡ "ರೈತ ಚೈತನ್ಯ ಯಾತ್ರೆ", 2017–18ರಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಶ್ರೀ ಬಿ ಎಸ್ ಯಡಿಯೂರಪ್ಪನವರ ನೇತೃತ್ವದಲ್ಲಿ ನಡೆದ 'ಪರಿವರ್ತನಾ ಯಾತ್ರೆ", 2018ರಲ್ಲಿ ನಡೆದ "ಬೆಂಗಳೂರು ರಕ್ಷಿಸಿ ಪಾದಯಾತ್ರೆ", ಬರ ಪರಿಶೀಲನೆ, – ಹೀಗೆ ಪಕ್ಷದ ಎಲ್ಲ ಹೋರಾಟಗಳಲ್ಲಿ ಅವರು ಅತ್ಯಂತ ಸಕ್ರಿಯವಾಗಿ ಭಾಗವಹಿಸಿದ್ದಾರೆ.

ಅವರು ಶ್ರೀಮತಿ ನಿರ್ಮಲಾ ಸೀತಾರಾಮನ್, ಶ್ರೀ ರಾಜೀವ್ ಚಂದ್ರಶೇಖರ್ ಅವರ ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದಿಂದ ಉಸ್ತುವಾರಿ ವಹಿಸಿಕೊಂಡಿದ್ದರು. ರಾಜ್ಯದಲ್ಲಿ ನಡೆದ ವಿಧಾನಪರಿಷತ್ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಾಗಿ ರಾಜ್ಯದ ಹಲವೆಡೆ ಪ್ರವಾಸ ನಡೆಸಿದ್ದಾರೆ. ಮಂಗಳೂರು, ಮೈಸೂರು, ಚಾಮರಾಜನಗರ, – ಹೀಗೆ ಹಲವು ಜಿಲ್ಲಾ ಸಂಘಟನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದ್ದಾರೆ. ಮಹದೇವಪುರ ಕ್ಷೇತ್ರವನ್ನು ಪ್ರತಿನಿಧಿಸುವ ಜೊತೆಗೆ ಅವರು ದೊಡ್ಡಬಳ್ಳಾಪುರ ಕ್ಷೇತ್ರದ ಉಸ್ತುವಾರಿಯನ್ನೂ ಹೊಂದಿದ್ದು ಆ ಕ್ಷೇತ್ರದ ಕಾರ್ಯಕರ್ತರೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡಿದ್ದಾರೆ; ನಿಯಮಿತವಾಗಿ ಅಲ್ಲಿಗೆ ಹೋಗಿ ಚರ್ಚಿಸಿ, ಮಾರ್ಗದರ್ಶನ ನೀಡುತ್ತಾರೆ.

ಇತ್ತೀಚೆಗೆ ಅವರು ಪಕ್ಷದ ರಾಷ್ಟ್ರಾಧ್ಯಕ್ಷ ಶ್ರೀ ಅಮಿತ್ ಶಾ ಅವರ ಹಿಂದಿ ಭಾಷಣವನ್ನು ಸುಲಲಿತವಾಗಿ ಕನ್ನಡಕ್ಕೆ ಅನುವಾದಿಸಿ ಮೆಚ್ಚುಗೆ ಪಡೆದಿದ್ದಾರೆ.

ಅನ್ನದಾತ ಸಮಾವೇಶ 2018

ಬರ ಪರಿಸ್ಥಿತಿ ವೀಕ್ಷಣೆ (ಮಂಡ್ಯ)2016

ಬೆಂಗಳೂರು ರಕ್ಷಿಸಿ ಪಾದಯಾತ್ರೆ 2018

ನ್ಯೂ ಮೀಡಿಯಾದ ಅನುಭವೀ ನಾಯಕ

ಶ್ರೀ ಅರವಿಂದ ಲಿಂಬಾವಳಿಯವರು ಇಂಟರ್‌ನೆಟ್ ಬಂದಾಗಿನಿಂದಲೂ ಅದನ್ನು ಸದುಪಯೋಗ ಮಾಡಿಕೊಂಡು ಬಂದ ನಾಯಕರಲ್ಲಿ ಮೊದಲಿಗರು. ಫೇಸ್‌ಬುಕ್‌ನಲ್ಲಿ 7 ಲಕ್ಷಕ್ಕಿಂತ ಹೆಚ್ಚು ಮಿತ್ರತ್ವ ಹೊಂದಿರುವ ಅವರು ಸದಾ ಆನ್‌ಲೈನ್ ಜಗತ್ತಿನ ವಿದ್ಯಮಾನಗಳನ್ನು ಗಮನಿಸುತ್ತಾರೆ; ಸ್ಪಂದಿಸುತ್ತಾರೆ. ಟ್ವಿಟರ್ ಖಾತೆಯಲ್ಲೂ ಅತ್ಯಂತ ಜನಪ್ರಿಯರಾಗಿರುವ ಶ್ರೀ ಲಿಂಬಾವಳಿಯವರು ಸಾಂಪ್ರದಾಯಿಕ ವೆಬ್‌ಸೈಟ್‌ನ್ನೂ ನಿರ್ವಹಿಸಿಕೊಂಡು ಬಂದಿದ್ದಾರೆ. ಈಮೈಲ್ ಮೂಲಕ ಸಾರ್ವಜನಿಕ ಕುಂದು ಕೊರತೆಗಳನ್ನು ಗಮನಿಸುವ, ವಾಟ್ಸ್‌ಅಪ್ ಮುಂತಾದ ಹೊಸ ಸಂವಹನ ಮಾಧ್ಯಮಗಳನ್ನು ದಕ್ಷವಾಗಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳುವ ಚಾಕಚಕ್ಯತೆ ಅವರಿಗಿದೆ. ಹೀಗೆಂದೇ ಅವರು ಪ್ರಸ್ತುತ ಕರ್ನಾಟಕ ಬಿಜೆಪಿಯ ಅಸಾಂಪ್ರದಾಯಿಕ (ನವ) ಮಾಧ್ಯಮಗಳ ಉಸ್ತುವಾರಿ ಹೊಂದಿದ್ದಾರೆ. ಡಿಜಿಟಲ್ ಅಭಿಯಾನವನ್ನು ನಡೆಸುವ ತಂತ್ರಗಾರಿಕೆ ಮತ್ತು ಆಧುನಿಕ ಸಂವಹನಾ ಸಾಧ್ಯತೆಗಳಿಗೆ ತೆರೆದುಕೊಳ್ಳುವ ಮುಕ್ತ ಮನಸ್ಸು ಅವರಿಗಿದೆ. ಸಾಂಪ್ರದಾಯಿಕ ಮಾಧ್ಯಮದ ಅನುಭವವನ್ನೂ ಹೊಂದಿರುವ ಅವರೀಗ ಹೊಸ ಸಾಧ್ಯತೆಗಳನ್ನು ಜನರ ಹಿತಕ್ಕಾಗಿ ಬಳಸಿಕೊಳ್ಳುವ ತಂತ್ರಜ್ಞಾನಗಳನ್ನು ಸ್ವಾಗತಿಸುವ ಉದಾರತೆ ಹೊಂದಿದ್ದಾರೆ. ಬೆಂಗಳೂರಿನ ರಿವೇಸಡ್ ಮಾಸ್ಟರ್ ಪ್ಲಾನ್‌ನ ಲೋಪಗಳನ್ನು ಅವರು ಇತ್ತೀಚೆಗೆ ಮುಖ್ಯಮಂತ್ರಿಯೆದುರೇ ಎಳೆ ಎಳೆಯಾಗಿ ಬಿಡಿಸಿಟ್ಟು ಸರ್ಕಾರವೇ ಪ್ಲಾನನ್ನು ತಿದ್ದುವುದಕ್ಕೆ ಮುಂದಾಗುವಂತೆ ಮಾಡಿದ್ದಾರೆ.

ಬಿ–ಪ್ಯಾಕ್ ವರದಿ: ಗರಿಷ್ಠ ನಿಧಿ ಬಳಸಿದ ಬೆಂಗಳೂರಿನ ಶಾಸಕರಲ್ಲಿ ಅರವಿಂದ ಲಿಂಬಾವಳಿಗೆ ಎರಡನೇ ಸ್ಥಾನ

2013–18ರ ಅವಧಿಯಲ್ಲಿ ಬೆಂಗಳೂರಿನ 28 ಶಾಸಕರ ಪೈಕಿ ಸ್ಥಳೀಯ ಅಭಿವೃದ್ಧಿ ನಿಧಿ ಬಳಕೆಯಲ್ಲಿ ಶ್ರೀ ಅರವಿಂದ ಲಿಂಬಾವಳಿಯವರು ಎರಡನೇ ಸ್ಥಾನ ಪಡೆದಿದ್ದಾರೆ.

ದೊರೆತಿರುವ ನಿಧಿಯಲ್ಲಿ ಗರಿಷ್ಠ ಪಾಲನ್ನು ಜನರ ಉದ್ಧಾರಕ್ಕಾಗಿ ಬಳಸಿದ ಸಮಾಧಾನ ನನ್ನ ಶ್ರೀ ಅರವಿಂದ ಲಿಂಬಾವಳಿಯವರದ್ದಾಗಿದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರದ ತಾರತಮ್ಯದಿಂದಾಗಿ ಮಹದೇವಪುರ ಕ್ಷೇತ್ರಕ್ಕೆ ಸರಿಯಾಗಿ ಅಭಿವೃದ್ಧಿ ನಿಧಿ ಬಿಡುಗಡೆಯಾಗಿಲ್ಲ ಎನ್ನುವ ಬೇಸರವೂ ಅವರಿಗಿದೆ.

ಶಾಂತಯುತ ಸಹಬಾಳ್ವೆಯ ಮಹದೇವಪುರ

ಬೆಂಗಳೂರು ನಗರದಲ್ಲಿ ಅಪರಾಧದ ಪ್ರಮಾಣ ಹೆಚ್ಚಿದ್ದರೂ ಮಹದೇವಪುರ ಕ್ಷೇತ್ರದಲ್ಲಿ ಅಪರಾಧ ಪ್ರಮಾಣ ಕಡಿಮೆ ಇದ್ದು ಎಲ್ಲಾ ಧರ್ಮಗಳ ಜನರು ಶಾಂತಿಯುತವಾಗಿ ಸಹಬಾಳ್ವೆ ನಡೆಸುತ್ತಿದ್ದಾರೆ. **(Lowest Crime Rate).**



ಅರವಿಂದ ಲಿಂಬಾವಳಿ

ಜನಪರಶಕ್ತಿ ಚುನಾವಣಾ ಪ್ರಣಾಳಿಕೆ

ಮಹದೇವಪುರ ವಿಧಾನಸಭಾ ಕ್ಷೇತ್ರ

ಕಾನೂನು ಮತ್ತು ಸುವ್ಯವಸ್ಥೆ

- ಶಾಂತ, ಸೌಹಾರ್ದ, ಅಪರಾಧರಹಿತ ಕ್ಷೇತ್ರ : ಮಹದೇವಪುರದಲ್ಲಿ ಈಗ ನೆಲೆಸಿರುವ ಶಾಂತಿ-ಸೌಹಾರ್ದತೆ ಮತ್ತು ಅಪರಾಧ ರಹಿತ ವಾತಾವರಣವು ಮುಂದುವರಿಯುವಂತೆ ಪ್ರಾಮಾಣಿಕ ಪ್ರಯತ್ನ.
- ರಾಷ್ಟ್ರೀಯ ವಿಪತ್ತು ಸ್ಪಂದನಾ ವ್ಯವಸ್ಥೆ (ನ್ಯಾಶನಲ್ ಎಮರ್ಜೆನ್ಸಿ ರೆಸ್ಪಾನ್ಸ್ ಸಿಸ್ಟಂ)ಯನ್ನು ಕ್ಷೇತ್ರದಲ್ಲಿ ಸಮರ್ಥವಾಗಿ ಅಳವಡಿಸಿಕೊಂಡಿರುವುದರ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಕಾನೂನು ಸುವ್ಯವಸ್ಥೆ ಕಾಪಾಡಲು ಪೋಲೀಸ್ ಠಾಣೆ ಮತ್ತು ಚೌಕಿಗಳನ್ನು ನಿರ್ಮಿಸುವುದು.
- ಪೋಲೀಸ್ ಗಸ್ತು ವಾಹನಗಳ ಸಂಚಾರ ಹೆಚ್ಚಿಸುವುದು ಹಾಗೂ ಪ್ರಮುಖ ರಸ್ತೆ, ಸ್ಥಳಗಳಲ್ಲಿ ಸಿ. ಸಿ. ಕ್ಯಾಮೆರಾಗಳನ್ನು ಅಳವಡಿಸುವುದು; ಚೆಕ್‌ಪೋಸ್ಟ್ ಸ್ಥಾಪಿಸುವುದು.

ಈ ಮೇಲೆ ತಿಳಿಸಿದ ಭರವಸೆಗಳ ಜೊತೆಗೆ ಬಿಜೆಪಿಯು ಕರ್ನಾಟಕ ಮತ್ತು ಬೆಂಗಳೂರಿಗಾಗಿ ಪ್ರಕಟಿಸುವ ಚುನಾವಣಾ ಪ್ರಣಾಳಿಕೆಗಳಲ್ಲಿ ಮಹದೇವಪುರಕ್ಕೆ ಅನ್ವಯವಾಗುವ ಎಲ್ಲ ಕೆಲಸ ಕಾರ್ಯಗಳನ್ನೂ ಕಾಲಬದ್ಧವಾಗಿ ಕಾರ್ಯಗತ ಮಾಡಲಾಗುವುದು.

ಅರವಿಂದ ಲಿಂಬಾವಳಿ

ಬಿಜೆಪಿ

ಸರ್ಕಾರ ಬದಲಿಸಿ, ಬಿಜೆಪಿ ಗೆಲ್ಲಿಸಿ

ಕಮಲದ ಬಟನ್ ಒತ್ತಿ – ಬಿಜೆಪಿಗೆ ಪೂರ್ಣ ಬಹುಮತ ನೀಡಿ

ಅರವಿಂದ ಲಿಂಬಾವಳಿ

ಮಹದೇವಪುರ ವಿಧಾನಸಭಾ ಕ್ಷೇತ್ರ

ಮಾಜಿ ಸಚಿವರು: ಉನ್ನತ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕರ್ನಾಟಕ ಸರ್ಕಾರ
ಸದಸ್ಯರು, ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ
ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ ಕರ್ನಾಟಕ

ಕಾರ್ಯಾಲಯ

#23/24ಚಿನ್ನಪ್ಪನಹಳ್ಳಿ, ಇ-ಝೋನ್ ಕ್ಲಬ್ ಒಳಗೆ
ಮಾರತ್ತಹಳ್ಳಿ ಸೇತುವೆಯ ಹತ್ತಿರ, ಮಾರತ್ತಹಳ್ಳಿ
ಬೆಂಗಳೂರು 560037
ದೂರವಾಣಿ: 080 28511333 / 28511999
ಈಮೈಲ್ ವಿಳಾಸ: arvindlimbavali@gmail.com

ವೆಬ್‌ಸೈಟ್: www.bjparvind.com

FACEBOOK arvindlimbavali.official | TWITTER bjparvind